# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ- 24.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಸಿ.ಕೆ.ನಾಗಪ್ಪ ಬಿನ್ ಲೇ.ಕಾಡಯ್ಯ<br>46 ವರ್ಷ<br>ವ್ಯವಸಾಯ<br>ಚೇಳೂರು |
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ- ಪ್ರತಿ ವಾದಿಗಳ ಪರ ವಕೀಲರಾದ ಶ್ರೀ. ಸಿ.ಎಸ್.ಎ. ರವರಿಂದ

ನನ್ನ ತಾಯಿ ದೊಡ್ಡಮ್ಮ(ವಾದಿ) ಚೆನ್ನಾಗಿ ಓಡಾಡುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಆರೋಗ್ಯ ಸರಿ ಇಲ್ಲ ಎಂದು ನಾನು ಸುಳ್ಳು ಅಧಿಕಾರ ಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸಾಕ್ಷಿಯು ನನ್ನ ತಾಯಿಗೆ ಮಂಡಿ ನೋವು ಇದ್ದು ಓಡಾಡಲು ಆಗುವುದಿಲ್ಲ ಎನ್ನುತ್ತಾರೆ. ನಂಜಯ್ಯನ ಹೆಂಡತಿ ಪುಟ್ಟಮ್ಮಳಿಗೆ ಸಿದ್ದಯ್ಯ ಎಂಬ ಮಗ ಇದ್ದ ಎಂದರೆ ಸರಿ. ಸದರಿ ಸಿದ್ದಯ್ಯನಿಗೆ ಶಿವನಂಜಯ್ಯ ಎನ್ನುವ ಮಗ ಇದ್ದ ಎಂದರೆ ಸರಿ. ಸಿದ್ದಯ್ಯನ ಹೆಂಡತಿಯ ಹೆಸರು ಪುಟ್ಟನಂಜಮ್ಮ ಎಂದರೆ ಸರಿ. ಶಿವನಂಜಪ್ಪನಿಗೆ ಪುಟ್ಟಮ್ಮ ಹಾಗೂ ಚಿಕ್ಕಮ್ಮ ಎನ್ನುವ ಇಬ್ಬರು ಹೆಂಡತಿಯರು ಇದ್ದರು ಎಂದರೆ ಸರಿ . ಶಿವನಂಜಪ್ಪ ಮತ್ತು ಪುಟ್ಟಮ್ಮ ಳಿಗೆ ಬೆಟ್ಟಪ್ಪ ಮತ್ತು ಪುಟ್ಟರಂಗಪ್ಪ ಎಂಬ ಇಬ್ಬರು ಮಕ್ಕಳಿದ್ದರು ಎಂದರೆ ಸರಿ. ಶಿವನಂಜಪ್ಪ ಮತ್ತು ಅವನ 2 ನೇ ಹೆಂಡತಿ ಚಿಕ್ಕಮ್ಮಳಿಗೆ ಇಬ್ಬರು ಹೆಣ್ಣು ಮಕ್ಕಳು ಶಾರದಮ್ಮ ಮತ್ತು ಪುಟ್ಟಮ್ಮ ಹಾಗೂ ಇಬ್ಬರು ಗಂಡು ಮಕ್ಕಳು ಚಿಕ್ಕಸಿದ್ದಪ್ಪ ಮತ್ತು ತಿಮ್ಮಣ್ಣ ಇದ್ದರು ಎಂದರೆ ಸರಿ.

2. ಸ.ನಂಃ200/1 ಒಟ್ಟು 3 ಎಕರೆ 29 ಗುಂಟೆ ವಿಸ್ತೀರ್ಣ ಇರುತ್ತದೆ. ದಾವಾಸ್ವತ್ತು ಮೂಲತಃ ಪ್ರತಿವಾದಿಯ ವಂಶಸ್ಥರಿಗೆ ಸೇರಿದ್ದು ಎಂದರೆ ಸರಿ. ನಾನು ನನ್ನ ವಾದಪತ್ರದಲ್ಲಿ ನಾರಾಯಣಮ್ಮ ಸ.ನಂಃ 200/ 1 ರಲ್ಲಿ 3 ಎಕರೆ 29 ಗುಂಟೆ ಪೈಕಿ 1 ಎಕರೆ 10 ಗುಂಟೆ ಜಮೀನನ್ನು ಕರಿಯಪ್ಪನಿಗೆ ಮಾರಾಟ ಮಾಡಿದ್ದಾಳೆ ಎಂದು ಬರೆಸಿದ್ದೇನೆ, ಸದರಿ ಜಮೀನು ನಾರಾಯಣಮ್ಮಳಿಗೆ ಅವಳ ಗಂಡ ಸಿದ್ದನಂಜಯ್ಯನಿಂದ ಬಂದಿತ್ತು. ಸದರಿ 1 ಎಕರೆ 10 ಗುಂಟೆ ಜಮೀನು ಸಿದ್ದನಂಜಯ್ಯನಿಗೆ ಸೇರಿದ್ದಾಗಿರಲಿಲ್ಲ ಎಂದರೆ ಸರಿಯಲ್ಲ.

3. ನಾನು 10 ನೇ ತರಗತಿಯವರೆಗೂ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ನಿ.ಪಿ.2 ರಿಂದ ನಿ.ಪಿ. 4 ರಲ್ಲಿ ಸಿದ್ದನಂಜಯ್ಯನ ಹೆಸರು ಇಲ್ಲ ಎಂದರೆ ಸರಿ. ಸದರಿ 1 ಎಕರೆ 10 ಗುಂಟೆ ಜಮೀನು ಸಿದ್ದನಂಜಯ್ಯನಿಗೂ ಸೇರಿದ್ದಲ್ಲ, ನಾರಾಯಣಮ್ಮನಿಗೂ ಸೇರಿದ್ದಲ್ಲ ನಾನು ನನ್ನ ವಾದಪತ್ರದಲ್ಲಿ ಅವರಿಗೆ ಸೇರಿದ್ದು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.6 ರಲ್ಲಿ ಸಿದ್ದಮ್ಮ ಹಾಗೂ ದೊಡ್ಡಮ್ಮ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಸಿದ್ದಮ್ಮ ಹಾಗೂ ದೊಡ್ಡಮ್ಮ ವಿಭಾಗ ಪತ್ರ ಮಾಡಿಕೊಂಡಿದ್ದರು ಎನ್ನುತ್ತಾರೆ. 1992 ರಲ್ಲಿ ಸಿದ್ದಮ್ಮ ಹಾಗೂ ದೊಡ್ಡಮ್ಮ ವಿಭಾಗ ಮಾಡಿಕೊಂಡಿದ್ದರು. ಸಿದ್ದಮ್ಮ ಹಾಗೂ ದೊಡ್ಡಮ್ಮಳಿಗೆ ಮೇಲೆ ಹೇಳಿದ 1 ಎಕರೆ 10 ಗುಂಟೆ ಜಮೀನನ್ನು ವಿಭಾಗ ಮಾಡಿಕೊಳ್ಳಲು ಯಾವುದೇ ಹಕ್ಕು ,ಸ್ವಾಧೀನ ಇರಲಿಲ್ಲ ನಾನು ಈ ದಾವೆಗೆಂದು ಅವರಿಬ್ಬರಿಗೂ ಹಕ್ಕಿತ್ತು ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿಃ08-05-1971 ರ ಕ್ರಯಪತ್ರವನ್ನು ನಾನು ಸೃಷ್ಟಿ ಮಾಡಿದ್ದೇನೆ , ನಾರಾಯಣಮ್ಮನಿಗೆ ಕ್ರಯ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

4. ದೊಡ್ಡಮ್ಮ ಹಾಕಿದ್ದ ಓ.ಎಸ್.64/1980 ರ ದಾವೆಯಲ್ಲಿ ಈಗಿನ ಪ್ರತಿವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿ.ಪಿ.10 ರಲ್ಲಿ ಆಗಿರುವ ತೀರ್ಪು ಪ್ರತಿವಾದಿಗಳಿಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ.

5. ಸ.ನಂಃ200/1 1992 ರಲ್ಲಿ ಸ.ನಂಃ200/12 ಆಗಿದೆ. ಆ ರೀತಿ ಪೋಡ್ ಆಗಿ ಬದಲಾಗಿದ್ದರ ಬಗ್ಗೆ ನಿಮ್ಮ ಬಳಿ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಹೌದು ಇದೆ ಎನ್ನುತ್ತಾರೆ. ಸ.ನಂಃ200/1 ರ 3 ಎಕರೆ 20 ಗುಂಟೆ ಜಮೀನು ಪ್ರತಿವಾದಿಗಳ ವಂಶಸ್ಥರಿಗೆ ಸೇರಿದು ಅವರು ಅದರ ಸ್ವಾಧೀನದಲ್ಲಿ ಇದ್ದರು ಅವರ ಮರಣಾನಂತರ ಉಳಿದ ಪ್ರತಿವಾದಿಗಳು ಮೇಲೆ ಹೇಳಿದ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ದಾವಾಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಗಳು ಜಮೀನು ಇದೆ ಎಂದರೆ ಸಾಕ್ಷಿಯು ಹೌದು ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ ಎರಡೂ ಕಡೆ ಇದ್ದಾರೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದ ಇದರ ಮಧ್ಯದಲ್ಲಿ ನನ್ನ ತಾಯಿಯ 1 ಎಕರೆ 10 ಗುಂಟೆ ಜಮೀನು ಇದೆ ಎನ್ನುತ್ತಾರೆ. ನನ್ನ ತಾಯಿಗೆ ಸೇರಿದ 1 ಎಕರೆ 10 ಗುಂಟೆ ಜಮೀನು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವು ಸ್ವಾಧೀನದಲ್ಲಿ ಇದ್ದೇವೆ ಎನ್ನುತ್ತಾರೆ.

6. ನಿ.ಪಿ. 7 ಈ ದಾವೆಗಾಗಿ ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.7 ಅನ್ನು ಸರ್ಕಾರಿ ಭೂಮಾಪಕರಾದ ರಮೇಶ್ ಎನ್ನುವವರು ತಯಾರು ಮಾಡಿರುತ್ತಾರೆ. ಅಳತೆ ಮಾಡುವಾಗ ಪೂರ್ವ ಮತ್ತು ಪಶ್ಚಿಮದಲ್ಲಿದ್ದ ಪ್ರತಿವಾದಿಗಳಿಗೆ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ರೀತಿ ಪ್ರತಿವಾದಿಗಳಿಗೆ ನೋಟೀಸ್ ಕೊಟ್ಟಿದ್ದರು ಎಂದು ಹೇಳಲು ನಾನು ಯಾವುದೇ ದಾಖಲೆಗಳನ್ನು ತೆಗೆದುಕೊಂಡಿಲ್ಲ. ದಾವಾಸ್ವತ್ತು ಮೂಲತಃ ಪ್ರತಿವಾದಿಗಳಿಗೆ ಸೇರಿದ್ದಾಗಿರುವುದರಿಂದ ಅದನ್ನು ಅವರು ಒತ್ತುವರಿ ಮಾಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಎಂದೂ ಅಳತೆ ಮಾಡಿಲ್ಲ , ಪ್ರತಿವಾದಿಗಳಿಗೆ ಸೇರಿರುವ ದಾವಾಸ್ವತ್ತನ್ನು ಕಬಳಿಸುವ ದುರುದ್ದೇಶದಿಂದ ನಾನು ನಿ.ಪಿ.7 ಅನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.8 ಮಹಜರ್ ಅನ್ನು ನಾನು ದಾವೆಗೆಂದು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.).

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ